# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 738

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಉತ್ತರಿಸುವ ದಿನಾಂಕ : 26.07.2019

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| 1 | ರೂ.75 ಲಕ್ಷ ಮೌಲ್ಯದ ಹುಬ್ಲೋಟ್ ವಾಚ್‌ನ್ನು ಅಂದಿನ ಮುಖ್ಯಮಂತ್ರಿಗಳಿಗೆ ಕೊಡುಗೆ ರೂಪದಲ್ಲಿ ನೀಡಿದ್ದು, ಈ ರೀತಿಯಾಗಿ ಕೊಡುಗೆ ರೂಪದಲ್ಲಿ ಸ್ವೀಕರಿಸಿದ ಹುಬ್ಲೋಟ್ ವಾಚ್‌ನ್ನು ಸರ್ಕಾರವು ಯಾವ ನಿಯಮದ ಅನ್ವಯ ಸರ್ಕಾರಿ ಸ್ವತ್ತನ್ನಾಗಿ ಪರಿಗಣಿಸಿದೆ; ಕೊಡುಗೆ ರೂಪದಲ್ಲಿ ಮುಖ್ಯಮಂತ್ರಿ ಮತ್ತು ಮಂತ್ರಿಮಂಡಲದ ಸದಸ್ಯರು ಸ್ವೀಕರಿಸಿದ ಎಲ್ಲಾ ವಸ್ತುಗಳನ್ನು ಸರ್ಕಾರದ ವಶಕ್ಕೆ ನೀಡಿದ್ದಲ್ಲಿ, ಕೊಡುಗೆಗಳನ್ನು ಪಡೆದ/ನೀಡಿದ ವ್ಯಕ್ತಿಗಳ ಎಲ್ಲಾ ಅಪರಾಧಗಳಿಗೆ ಕ್ಷಮೆ ನೀಡಲಾಗಿದೆಯೆಂದು ಅರ್ಥವೇ ಈ ಕುರಿತು ಸರ್ಕಾರದ ನಿಲುವೇನು; | ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಸಿದ್ದರಾಮಯ್ಯನವರು ಅಂದಿನ ಮಾನ್ಯ ವಿಧಾನಸಭಾ ಸಭಾಧ್ಯಕ್ಷರಿಗೆ ದಿನಾಂಕ 02.03.2016ರಂದು ಒಂದು HUBLOT BIG BANG-301-M ವಾಚ್‌ನ್ನು ನೀಡಿ, ಅದನ್ನು ಅವರ ಸ್ನೇಹಿತರು ಗಿಫ್ಟ್ ನೀಡಿದ್ದಾರೆಂದು ತಿಳಿಸಿ ಅದನ್ನು ಕ್ಯಾಬಿನೆಟ್ ಹಾಲ್‌ನಲ್ಲಿ ಇಡಲು ಮಾನ್ಯ ವಿಧಾನಸಭಾ ಸಭಾಧ್ಯಕ್ಷರನ್ನು ಕೋರಿದ್ದರು. ಅದರಂತೆ ಮಾನ್ಯ ವಿಧಾನಸಭಾ ಸಭಾಧ್ಯಕ್ಷರು ಅಂದಿನ ಮುಖ್ಯ ಕಾರ್ಯದರ್ಶಿಯವರಿಗೆ ಸದರಿ ವಾಚ್‌ನ್ನು ಕಳುಹಿಸಿ ಕ್ಯಾಬಿನೆಟ್ ಹಾಲ್‌ನಲ್ಲಿ ಸಂರಕ್ಷಿಸಿಡಲು ಕೋರಿದ್ದರು. ಅದರಂತೆ, ಸದರಿ ವಾಚ್‌ನ್ನು ಅಂದಿನ ಮುಖ್ಯ ಕಾರ್ಯದರ್ಶಿಗಳು ಸ್ವೀಕರಿಸಿ ದಿನಾಂಕ 02.03.2016ರಂದು ಕ್ಯಾಬಿನೆಟ್ ಹಾಲ್‌ನಲ್ಲಿ ಇಟ್ಟಿರುತ್ತಾರೆ. |
| 2 | ಈ ಕೊಡುಗೆ ರೂಪದಲ್ಲಿ ಮುಖ್ಯಮಂತ್ರಿ ಮತ್ತು ಮಂತ್ರಿ ಮಂಡಲದ ಸದಸ್ಯರು ಸ್ವೀಕರಿಸಿದ ಎಲ್ಲಾ ವಸ್ತುಗಳನ್ನು ಪ್ರದರ್ಶಿಸಲು ಅನುವಾಗುವಂತೆ ವಸ್ತುಗಳ ಸಂಗ್ರಹಾಲಯವನ್ನು ತೆರೆಯಲು ಸರ್ಕಾರ ಆಲೋಚಿಸಿದೆಯೇ; | ಅಂತಹ ಆಲೋಚನೆಯು ಇರುವುದಿಲ್ಲ. |

ಸಂಖ್ಯೆ: ಸಸಂಶಾ 02 ವಿಪ 2019

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ